# 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ

## ಸಿಸಿ ನಂಃ 384/2016

ಪಿಡಬ್ಲೂ: 5 ಸಿಡಬ್ಲ್ಯೂ:17

| | |
|---|---|
| ಸಾಕ್ಷಿದಾರರ ಹೆಸರು | ಎಸ್. ರಾಜು |
| ತಂದೆಯ ಹೆಸರು | ಲೇಟ್ ಶಾಂತರಾಜು |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಡಿ.ವೈ.ಎಸ್.ಪಿ ಪೊಲಿಸ್ ಇಲಾಖೆ |
| ವಾಸ | ಮೈಸೂರು |

ಸಾಕ್ಷಿಯನ್ನು ದಿನಾಂಕಃ-25.02.2025 ರಂದು ಪ್ರಮಾಣ ಮಾಡಿಸಲಾಯಿತು

ಮುಖ್ಯ ವಿಚಾರಣೆಃ- ಶ್ರೀ ಸ.ಸ.ಅ. ರವರಿಂದ.

ನಾನು ದಿನಾಂಕ: 18-08-2014 ರಿಂದ 09-04-2016 ರವರೆಗೆ ಮಳವಳ್ಳಿ ಪುರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ 4.5.2015 ರಂದು ಪ್ರಕರಣದ ಕಡತವನ್ನು ಚಾಸ 16 ರಿಂದ ಪಡೆದುಕೊಂಡು ನಂತರ ದಿಃ 4.11.2015 ರಂದು ಚಾಸ 11 ರವರಿಂದ ಪ್ರಕರಣ ಸಂಖ್ಯೆ 196/14 ಕ್ಕೆ ಸಂಬಂಧಪಟ್ಟಂತೆ ಪ್ರಕರಣದ ಕಡತಗಳನ್ನು ಮತ್ತು ಮಾಲನ್ನು ಸ್ವೀಕರಿಸಿ ಪರಿಶೀಲಿಸಿರುತ್ತೇನೆ. . ಸದರಿಯವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ 2.12.2015 ರಂದು ನಮ್ಮ ಪ್ರಕರಣ ಸಂಖ್ಯೆಗೆ ಸಂಬಂಧಪಟ್ಟಂತ ಸ್ವೀಕರಿಸಿದ ಮಾಲಾದ ಎರಡು ಓಲೆಗಳನ್ನು ಮಾಲು ಫಾರಂಗೆ ನಮೂದಿಸಿಕೊಂಡು ತನಿಖೆ ಮುಗಿದಿದ್ದರಿಂದ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಸ್ವೀಕರಿಸಿದ ಮಾಲುಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ 6 ಎಂದು ಸಾಕ್ಷಿ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಚಾಸ 11 ಕೊಟ್ಟ ದಾಖಲಾತಿ ಪಟ್ಟಿಯನ್ನು ನಿಪಿ 7 ಎಂದು ಸಾಕ್ಷಿ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್ ಪಿ ಆರ್ ವಕೀಲರಿಂದ:

ಚಾಸ 11 ರವರಿಂದ ಲಿಖಿತ ಕಡತವನು ಪಡೆದುಕೊಂಡಿರುತ್ತೇನೆ. ಸ್ವೀಕರಿಸಿದ ಓಲೆಗಳ ಬಗ್ಗೆ ರಸೀದಿ ದಾಖಲಾತಿಗಳನ್ನು ತನಿಖೆ ಮಾಡಿರುವುದಿಲ್ಲ ಪಡೆದುಕೊಂಡಿರುವುದಿಲ್ಲ. ಹಾಗೂ ಚಾಸ 11 ರವರು ಸಹ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೆ ಇದ್ದರು ಅವರಿಗೆ ತೊಂದರೆ ಕೊಡಲು ದೋಷಾರೋಪಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಸೂಚಿಸಿರುವ ಓಲೆಯು ಯಾವ ಆಕಾರದಲ್ಲಿ ಇರುತ್ತದೆ ಎಂದು ನಮೂದು ಮಾಡಿರುವುದಿಲ್ಲ. ಚಾರ್ಜು ಶೀಟುಸ ಸಲಿಲಸುವ ಸಮಯದಲ್ಲಿ ಓಲೆ ಯಾವ ಅಂಗಡಿಯಲ್ಲಿ ತಯಾರಿಸಿರುತ್ತಾರೆ ಎಂದು ತನಿಖೆ ಮಾಡಿ ನಮೂದು ಮಾಡಿರುವುದಿಲ್ಲ.ಹಾಗೂ ದೂರುದಾರರಿಂದಲು ಸಹ ಓಲೆ ಯಾವ ಚಿನ್ನದ ಅಂಗಡಿಯಲ್ಲಿ ತಯಾರಿಸಿರುತ್ತಾರೆ ಎಂದು ಪರಿಶೀಲನೆ ಮಾಡಿರುವುದಿಲ್ಲ.

ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರು **2** ಮತ್ತು **3** ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಮಾಡಿರುವ ಮನವಿಯನ್ನು ಸ್ವೀಕರಿಸಲಾಯಿತು.

**(ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಿಂದ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ.